## ರಂಜಿಸಿದ ಚಲನಚಿತ್ರ

**ಜೂ**ನ್ 3ರಂದು ಸಂಜೆ 6 ಗಂಟೆಗೆ ಉದಯ ವಾಹಿನಿಯಲ್ಲಿ ಪ್ರಸಾರವಾದ 'ಕನಕ' ಚಲನಚಿತ್ರವನ್ನು ಮನೆ ಮಂದಿಯೆಲ್ಲರೂ ವೀಕ್ಷಿಸಿ ಆನಂದಿಸಿದೆವು. ಈ ಸಿನಿಮಾ ನಮ್ಮೆಲ್ಲರನ್ನೂ ರಂಜಿಸಿತು. ದಕ್ಷ ನಿರ್ದೇಶನ, ಮನೋಜ್ಞ ಅಭಿನಯ, ಚುರುಕಾದ ಸಂಭಾಷಣೆ, ಇಂಪಾದ ಹಾಡುಗಳು, ಸುಂದರ ಛಾಯಾಗ್ರಹಣದಿಂದ ಕೂಡಿದ ಈ ಚಲನಚಿತ್ರವು ವಾರಾಂತ್ಯದಲ್ಲಿ ಖುಷಿ ನೀಡಿತು.

–ವಿ. ಹೇಮಂತಕುಮಾರ, ಬೆಂಗಳೂರು

## ಮೆಚ್ಚಿನ ವಾಹಿನಿ

'ಸರಳ ಜೀವನ' ವಾಹಿನಿಯಲ್ಲಿ ಬಹಳಷ್ಟು ಒಳ್ಳೆಯ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ಸಾಮಾಜಿಕ ಕಳಕಳಿ, ಸಾಹಿತ್ಯ, ಸಂಸ್ಕೃತಿ, ಕಲೆ, ಜೀವನದ ಮೌಲ್ಯಗಳು, ಶಿಕ್ಷಣ, ಆರೋಗ್ಯ, ಉದ್ಯೋಗ, ವಾಸ್ತು, ಸುದ್ದಿ ಸಮಾಚಾರಗಳು, ಪ್ರಕೃತಿ ಸಂಬಂಧಿ ಕಾರ್ಯಕ್ರಮಗಳಿವೆ.

ದ್ವೇಷ, ಅಸೂಯೆ ಬಿತ್ತುವ, ಕೇಡು ಬಗೆಯುವ, ಮನಸ್ಸನ್ನು ಕಲುಷಿತಗೊಳಿಸುವ ವಿವಿಧ ವಾಹಿನಿಗಳಲ್ಲಿ ಪ್ರಸಾರವಾಗುತ್ತಿರುವ ಅನೇಕ ಧಾರಾವಾಹಿಗಳನ್ನು ನೋಡಿ ನಮ್ಮ ಮನಸ್ಸು ಕೆಡಿಸಿಕೊಂಡಿದ್ದೇವೆ. ಈ ವಾಹಿನಿಯ ಕಾರ್ಯಕ್ರಮಗಳನ್ನು ನೋಡಿದರೆ ಕಲುಷಿತ ಮನಸ್ಸು ತಿಳಿಯಾಗಬಹುದು.

–ಸುಂದರ್, ಬೆಂಗಳೂರು

## ಅಳುವಿನ ನಾಟಕ

ಇತ್ತೀಚೆಗೆ ಸ್ಟಾರ್ ಸುವರ್ಣ ಟಿ.ವಿ. ಚಾನೆಲ್ ಕನ್ನಡದ ಕೋಟ್ಯಧಿಪತಿ ಕಾರ್ಯಕ್ರಮಕ್ಕೆ ರಾಜ್ಯದ ನಾನಾ ಜಿಲ್ಲೆಗಳಿಂದ ಸ್ಪರ್ಧಿಗಳನ್ನು ಆಹ್ವಾನಿಸಿತ್ತು. ಅದಕ್ಕೆ ಬೆಂಗಳೂರಿನಲ್ಲಿ ಮೇ 25–27ರ ವರೆಗೆ ಆಡಿಷನ್ಸ್ ನಡೆಸಿತ್ತು. ಅಲ್ಲಿ ವಿಡಿಯೋ ಮುಂದೆ ಮಾತುಕತೆ ನಡೆಸುತ್ತಿದ್ದರು. ಆದರೆ ಆಡಿಷನ್‌ಗೆ ಬಂದಿದ್ದ ಕೆಲವು ಮಹಿಳೆಯರು ಆಡಿಷನ್ ನಡೆಸುವಾಗ ಅಳುತ್ತಿದ್ದರು. 'ಕಡ್ಡಾಯವಾಗಿ ನಾವು ಅಳಬೇಕೇ?' ಎಂದು ನಾನು ಒಬ್ಬರನ್ನು ಕೇಳಿದೆ. 'ಇದೆಲ್ಲಾ ನಾಟಕ ಸರ್. ಕಾರ್ಯಕ್ರಮದಲ್ಲಿ ಅಳುತ್ತಾ ತಮ್ಮ ಕುಟುಂಬದ ಸಮಸ್ಯೆ ಹೇಳಿಕೊಂಡರೆ "ಕೋಟ್ಯಧಿಪತಿ"ಯಲ್ಲಿ ಆಯ್ಕೆ ಆಗಬಹುದೆಂಬುದು ಅವರ ನಾಟಕ' ಎಂದು ಆತ ಹೇಳಿದಾಗ, ನನಗೆ ಅನ್ನಿಸಿತು, ನಾನು ಕೂಡ ಅಳಬಹುದಾಗಿತ್ತಲ್ಲ ಅಂತ.

–ಕೆ.ರಾಮು, ಶಿವಮೊಗ್ಗ

ವಾರದ ಪತ್ರ

## ನಗಿಸಿದ 'ಮಜಾ ಟಾಕೀಸ್'

**ಕ**ಲರ್ಸ್ ಸೂಪರ್ ವಾಹಿನಿಯಲ್ಲಿ ಸೃಜನ್ ಲೋಕೇಶ್ ನಡೆಸಿಕೊಡುವ 'ಮಜಾ ಟಾಕೀಸ್' ಕಾರ್ಯಕ್ರಮವು ಕೆಲವೊಮ್ಮೆ ಮುಜುಗರವನ್ನುಂಟು ಮಾಡುತ್ತದೆ. ಆದರೆ ಜೂನ್ 1ರಂದು ನಡೆಸಿಕೊಟ್ಟ ಕಾರ್ಯಕ್ರಮ ಅತ್ಯುತ್ತಮವಾಗಿತ್ತು. ಕೃಷ್ಣೇಗೌಡರು ಒಂದು ಪದಕ್ಕೆ ಹಲವು ಅರ್ಥಗಳನ್ನು ನೀಡುವ ಪದಪುಂಜಗಳನ್ನು ಪಟಪಟನೆ ಹೇಳಿ ಕಂಗ್ಲಿಷ್ ವ್ಯಾಮೋಹಿಗಳನ್ನು ಆಕರ್ಷಿಸಿದರು. ಕುಡುಕರ ಸುಪ್ರಭಾತದ ಹತ್ತು ಸಾಲುಗಳನ್ನು ಹೇಳಿ ನಗೆಗಡಲಿನಲ್ಲಿ ತೇಲಿಸಿದರು. ನಂತರ ಬಂದ ಪರಿಸರ ಪ್ರೇಮಿ ರಮೇಶ್ ಅವರ ಕಾರ್ಯಕ್ರಮವು ಸಾಹಸಮಯವಾದದ್ದು. ಕಾವೇರಿ ತೀರದಲ್ಲಿ ಸಾವಿರ ಮರ ಬೆಳೆಸಿದ ಸರದಾರರು. ಅದೂ ಗುಡ್ಡದ ಮೇಲೆ ಗಿಡಗಳನ್ನು ನೆಡಲು ಸಂಘ–ಸಂಸ್ಥೆಗಳು ಹುಟ್ಟಿಕೊಂಡಿದ್ದು ಎಲ್ಲ ಮೆಚ್ಚುವಂತಹದ್ದೆ. ಒಳ್ಳೆಯ ಕಾರ್ಯಕ್ರಮವನ್ನು ಆಯ್ದುಕೊಂಡು ಸಾಮಾಜಿಕ ಕಳಕಳಿಯಿರುವ ಉತ್ತಮ ರೀತಿಯ ಸಂದೇಶ ನೀಡುತ್ತಿರಲಿ ಎಂಬುದು ನಮ್ಮ ಹಾರೈಕೆ.

–ಲಲಿತಾ ಅಂಬಾಗಿಲು, ಉಪ್ಪುಂದ

## ಪುಸ್ತಕ ಪ್ರೀತಿ ಬೆಳೆಸುವ 'ಥಟ್….'

ಚಂದನ ವಾಹಿನಿಯಲ್ಲಿ ಪುಸ್ತಕ ಪ್ರೀತಿಯನ್ನು ಬೆಳೆಸುವ 'ಥಟ್ ಅಂತಾ ಹೇಳಿ' ಕಾರ್ಯಕ್ರಮ ಪ್ರಸಾರವಾಗುತ್ತಿದೆ. ಪ್ರತಿ ಕಾರ್ಯಕ್ರಮದಲ್ಲೂ ಒಂದು ಹೊಸ ಪುಸ್ತಕದ ಪರಿಚಯ ಮಾಡಿಕೊಡುತ್ತಾರೆ. ಕಾರ್ಯಕ್ರಮದ ನಿರೂಪಕರಾದ ಡಾ. ನಾ. ಸೋಮೇಶ್ವರ ಪುಸ್ತಕ ಪರಿಚಯ ಮಾಡುವ ರೀತಿ ಅಮೋಘ. ಅಲ್ಪ ಸಮಯದಲ್ಲಿ ಇಡೀ ಪುಸ್ತಕದ ಹೂರಣದ ರುಚಿ ತೋರಿಸಿ ಪುಸ್ತಕ ಪ್ರಿಯರು ಪುಸ್ತಕವನ್ನು ಇಡಿಯಾಗಿ ಓದುವ ಇಚ್ಛೆಯನ್ನು ಕುದುರಿಸುತ್ತಾರೆ. ಸಾಮಾನ್ಯ ಪ್ರೇಕ್ಷಕರೇ ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಇದರ ವೈಶಿಷ್ಟ್ಯ.

ಇದು ವಿದ್ಯಾರ್ಥಿಗಳಿಗೆ ಹೇಳಿ ಮಾಡಿಸಿದಂತಹ ಕಾರ್ಯಕ್ರಮ. ಇಂತಹ ಜನೋಪಯೋಗಿ ಕಾರ್ಯಕ್ರಮಗಳು ಇನ್ನಷ್ಟು ಬರಲಿ ಎಂದು ಆಶಿಸೋಣ.

–ಕೆ.ಪಿ. ರಾಮಗುಂಡಿ, ಬೈಲಹೊಂಗಲ

## 'ಗಂಗಾ'ಗೆ ತೆರೆ ಎಳೆಯಲಿ

ಝೀ ಕನ್ನಡದಲ್ಲಿ 'ಗಂಗಾ' ಧಾರಾವಾಹಿ ಮಧ್ಯಂತರದಲ್ಲಿ ಕುತೂಹಲಕಾರಿಯಾಗಿತ್ತು. ಆದರೆ ಇದನ್ನು ಈಗ ದೀರ್ಘವಾಗಿ ಎಳೆಯಲಾಗುತ್ತಿದೆ. ಗೌರಿ ದೀರ್ಘಕಾಲ ವಾಡೆಯಲ್ಲಿ ಇರುವುದು ಅಜ್ಜಮ್ಮನಿಗೆ ಗೊತ್ತಿದ್ದರೂ ಹೇಳದೆ ಇರುವುದು, ನಂದಿನಿಯ ಗಂಡ ವಕೀಲರಾಗಿದ್ದು, ಸಾಗರ ವಿದೇಶದಲ್ಲಿದ್ದು ಬಂದಿದ್ದಾನೆ. ಆದರೂ ನಂದಿನಿ ಅಪಹರಣದ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳದಿರುವುದು ಕಥೆಯನ್ನು ವೃಥಾ ಎಳೆಯುವ ತಂತ್ರವಾಗಿದೆ.

ನಿರ್ದೇಶಕರು ಬೇಗ ನಂದಿನಿಯ ಬಿಡುಗಡೆ ಮಾಡಿಸಿ, ಗೌರಿಗೆ ತಕ್ಕ ಶಿಕ್ಷೆ ನೀಡುವ ಮೂಲಕ ವೀಕ್ಷಕರ ಕುತೂಹಲಕ್ಕೆ ತೆರೆ ಎಳೆಯಲಿ.

–ವಿ.ಎಸ್. ಹಿಂದೂಪುರ, ಬಳ್ಳಾರಿ

## ಅನುಮಾನ ತರಿಸುವ '..ಮೋಹಿನಿ'

ಝೀ ಟಿವಿಯಲ್ಲಿ ಪ್ರಸಾರವಾಗುತ್ತಿರುವ ಧಾರಾವಾಹಿ 'ಯಾರೇ ನೀ ಮೋಹಿನಿ?' ನೋಡುವವರಿಗೆ ಬೇಸರ ಮತ್ತು ಅನುಮಾನ ತರಿಸುವಂತಿದೆ. ಮುತ್ತುವಿನ ಅತ್ತೆ ನೀಲಾಂಬರಿ ಆಸ್ಪತ್ರೆ ಸೇರಿ ತಿಂಗಳಾಯಿತು. ಅವರ ಬಗ್ಗೆ ಮನೆಮಂದಿ ಯಾರೊಬ್ಬರೂ ವಿಚಾರಿಸುತ್ತಿಲ್ಲ. ಪ್ರತಿ ನಿಮಿಷಕ್ಕೂ ನೆನಪಿಸುವ ಮುತ್ತು, ಚಿಕ್ಕಮ್ಮನ ಆರೋಗ್ಯದ ಬಗ್ಗೆ ವಿಚಾರಿಸದೆ, ಆಸ್ಪತ್ರೆಗೂ ಹೋಗದೆ ಮದುವೆಯ ವಿಷಯದಲ್ಲಿ ತಲೆ ಕೆಡಿಸಿಕೊಂಡಿರುವುದು ವಿಪರ್ಯಾಸ. ಇಂತಹ ಅನುಮಾನಕ್ಕೆ ಆಸ್ಪದ ನೀಡುವುದು ಬೇಡ.

–ಅಂಚೆ ಸುಬ್ರಮಣ್ಯ, ಕೊಪ್ಪ

## ಉಪಯುಕ್ತ ಸಂದರ್ಶನ

ವಿಶ್ವ ಪರಿಸರದ ದಿನದ ಅಂಗವಾಗಿ ಚಂದನ ವಾಹಿನಿಯು ಜೂನ್ 5ರಂದು ರಾತ್ರಿ ಪ್ರಸಾರ ಮಾಡಿದ 'ಹೊರಳು ನೋಟ' ಕಾರ್ಯಕ್ರಮದಲ್ಲಿ ವಿಜ್ಞಾನ ಲೇಖಕ ನಾಗೇಶ ಹೆಗಡೆ ಅವರ ಜೊತೆ ನಡೆಸಿದ ಸಂದರ್ಶನ ಸಕಾಲಿಕವಾಗಿತ್ತು.

ಸಮಕಾಲಿನ ಪರಿಸರ ಮತ್ತು ವಿಜ್ಞಾನ ಸಂಬಂಧಿ ಸಂಶೋಧನೆಗಳ ಬಗ್ಗೆ ಅಪಾರ ತಿಳಿವಳಿಕೆಯನ್ನು ನಾಗೇಶ ಹೆಗಡೆಯವರು ಸಂಪಾದಿಸಿದ್ದಾರೆ. ಅವರ ಸಂದರ್ಶನದಿಂದ ಯುವಬರಹಗಾರರಿಗೆ ತುಂಬಾ ಅನುಕೂಲವಾಯಿತು. ಅವರ ಅನುಭವದ ಸಾರವನ್ನು ಚಂದನವಾಹಿನಿ ಸೊಗಸಾಗಿ ಹಿಡಿದುಕೊಟ್ಟಿತು. ಇಂತಹ ಅರ್ಥಪೂರ್ಣ ಕಾರ್ಯಕ್ರಮ ರೂಪಿಸಿದ ವಾಹಿನಿಗೆ ಧನ್ಯವಾದಗಳು.

–ನಾರಾಯಣ ಯಾಜಿ, ಶಿರಾಲಿ